**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂಗಳವರ**
**ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ಓ ಎಸ್ ನಂ. 182/2020**

ಪಿ ಡಬ್ಲ್ಯು: 3

| | |
|---|---|
| ಸಾಕ್ಷಿಯ ಹೆಸರು | ಗಂಗಾಧರಪ್ಪ |
| ತಂದೆಯ ಹೆಸರು | ಕೆ ಎಂ ಶಂಕರಪ್ಪ |
| ವಯಸ್ಸು | 44 ವರ್ಷ |
| ಉದ್ಯೋಗ | ತಾಲ್ಲೂಕು ಸರ್ವೆಯರ್ |
| ವಾಸ | ಕಡೂರು. |

ದಿನಾಂಕ 12-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ: ಶ್ರೀ ಎಂ ಎಂ ವಕೀಲರಿಂದ:

ಈ ಕೇಸಿನಲ್ಲಿ ಸಾಕ್ಷ್ಯ ನುಡಿಯುವಂತೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿದ್ದ ಮೇರೆಗೆ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ನಾನು ಕಡೂರು ತಾಲ್ಲೂಕು ಸರ್ವೆಯರಾಗಿ ನಾನು ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನನ್ನು ಭೂ ವಿಜ್ಞಾನ ಗಣಿ ಇಲಾಖೆ, ಚಿಕ್ಕಮಗಳೂರು ಇವರು ಸರ್ವೆ ನಂ.25/1 ಮತ್ತು 25/2 ರ ಜಂಟಿ ಅಳತೆಗೆ ಗಡಿ ಗುರುತಿಸಲು ಪತ್ರ ಬಂದಿದ್ದು, ಅದರಂತೆ ನಾನು ದಿನಾಂಕ 20/08/2020 ರಂದು ಭೂ ವಿಜ್ಞಾನ ಇಲಾಖೆ ಸಿಬ್ಬಂದಿಗಳು ಮತ್ತು ಅಧಿಕಾರಿಗಳು, ಸರ್ವೆಯರ್ ಮತ್ತು ರಾಜಸ್ವ ನಿರೀಕ್ಷಕರ ಸಮಕ್ಷಮ ನಾನು ಸರ್ವೆ ನಂ.25/1 ಮತ್ತು 25/2 ನ್ನು ಅಳತೆ ಮಾಡಿ ಗಡಿ ಗುರುತಿಸಿರುತ್ತೇನೆ. ಅದರ ಬಗ್ಗೆ ನಾನು ವರದಿ ನೀಡಿರುವುದಿಲ್ಲ, ಕೇವಲ ನಕ್ಷೆಯನ್ನು

ತಯಾರಿಸಿ ಭೂ ವಿಜ್ಞಾನ ಇಲಾಖೆಗೆ ನೀಡಿರುತ್ತೇನೆ. ಅಳತೆ ಮಾಡುವ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ ಹಾಜರಿದ್ದರು.

ನಾನು ಅಳತೆ ಮಾಡಿ ನೀಡಿದ ನಕ್ಷೆಯು ನಿಪಿ-10 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನಿಪಿ-10 ರ ನಕ್ಷೆಯನ್ನು ಸ್ಥಳ ಯಾವ ರೀತಿಯಲ್ಲಿತ್ತೊ ಅದೇ ರೀತಿಯಲ್ಲಿ ಮಾಡಿದ್ದೇನೆ. ನಿಪಿ-15 ರ ಮಹಜರಿಗೂ ಸಹ ನಾನು ಸಹಿ ಮಾಡಿರುತ್ತೇನೆ. ಪ್ರತಿವಾದಿಯು ವಾದಿಯ ಜಾಗವಾದ ಸರ್ವೆ ನಂ.25/2 ರ ಜಾಗವನ್ನು ಒತ್ತುವರಿ ಮಾಡಿರುವುದನ್ನು ನಾನು ಸರ್ವೆ ಮಾಡಿ ನಕ್ಷೆಯಲ್ಲಿ ನಮೂದು ಮಾಡಿ ಸ್ಥಳದಲ್ಲಿ ತೋರಿಸಿರುತ್ತೇನೆ. ಒತ್ತುವರಿ ಮಾಡಿರುವುದನ್ನು ತೋರಿಸಿ ನಾನು ನಂತರ ಹದ್ದುಬಸ್ತು ಮಾಡಿ ವಾದಿ ಮತ್ತು ಪ್ರತಿವಾದಿಯರಿಗೆ ದಾಖಲಾತಿಗಳ ಪ್ರಕಾರ ಗಡಿ ಗುರುತಿಸಿಕೊಟ್ಟಿರುತ್ತೇನೆ. ಒತ್ತುವರಿ ಮಾಡಿದ ಜಾಗದಲ್ಲಿ ಗ್ರಾನೇಟ್ ತೆಗೆದಿರುವುದಿಲ್ಲ. ಸರ್ವೆ ನಂ.25/1 ರ ಜಮೀನು ಪ್ರತಿವಾದಿಯದ್ದಾಗಿದ್ದು ಅದರಲ್ಲಿ ಅವರು ಗಣಿಗಾರಿಕೆ ಮಾಡಿರುತ್ತಾರೆ. ಒತ್ತುವರಿ ತೆರವು ಗೊಳಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಎನ್ ಎಸ್ ವಕೀಲರಿಂದಃ</u>

ನಿಡಿ-1 ರಿಂದ 5 ರಲ್ಲಿ ಕಂಡು ಬರುವ ಕಲ್ಲುಗಳನ್ನು ಅಳತೆ ಮಾಡಿ ಗಡಿ ಗುರುತಿಸಿ ನೆಟ್ಟಿರುವುದು. ಸರ್ವೆ ನಂ.25/2 ರಲ್ಲಿ ವಾದಿಗೆ ಸೇರಿದ 6 ಎಕರೆ 27 ಗುಂಟೆ ಜಮೀನು ಇದೆ ಎಂದರೆ

ನಿಜ. ಸರ್ವೆ ನಂ.25/1 ರಲ್ಲಿ ಪ್ರತಿವಾದಿಗೆ ಒಟ್ಟು 5 ಎಕರೆ 4 ಗುಂಟೆ ಇದ್ದು 2 ಗುಂಟೆ ಖರಾಬು ಹೋಗಿ 5 ಎಕರೆ 2 ಗುಂಟೆ ಇದೆ. ನಿಡಿ-1 ರಲ್ಲಿ ಕಂಡು ಬರುವ ಬೇಲಿಯನ್ನು ಒತ್ತುವರಿ ತೆರವು ಗೊಳಿಸಿ ಹಾಕಲಾಗಿದೆ. ವಾದಿಯು 6 ಎಕರೆ 27 ಗುಂಟೆಯಲ್ಲಿ ಸ್ವಾಧೀನ ಇದ್ದಾರೆ ಎಂದರೆ ನಿಜ. ವಾದಿಯ ಜಾಗದಲ್ಲಿ ಪ್ರತಿವಾದಿ ಗಣಿಗಾರಿಕೆ ಮಾಡಿಲ್ಲ ಎಂದರೆ ನಿಜ. ಪ್ರತಿವಾದಿ ತನ್ನ ಜಮೀನಿನಲ್ಲಿ ಮಾತ್ರ ಗಣಿಗಾರಿಕೆ ಮಾಡಿರುತ್ತಾರೆ ಎಂದರೆ ನಿಜ. ಸ್ಥಳದಲ್ಲಿ ಒತ್ತುವರಿ ತೆರವುಗೊಳಿಸಿದ್ದು, ನಿಪಿ-10 ರ ನಕ್ಷೆಯನ್ನು ಕಚೇರಿಯಲ್ಲಿ ತಯಾರಿಸಿರುತ್ತೇನೆ. ನಕ್ಷೆಯಲ್ಲಿ ಒತ್ತುವರಿ ಎಂದು ತೋರಿಸಿರುವ ಒಂದೂವರೆ ಗುಂಟೆ ಜಮೀನನ್ನು ನಮ್ಮ ಸಮಕ್ಷಮ ಪ್ರತಿವಾದಿಯು ವಾದಿಗೆ ಬಿಟ್ಟು ಕೊಟ್ಟ ನಂತರ ಬೇಲಿಯನ್ನು ಹಾಕಲಾಗಿದೆ ಎಂದರೆ ನಿಜ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.